# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಶಹಬಾದ</u>

**CC No : 2070/2021**

CW : 1 PW : 1

| | | |
|---|---|---|
| ಹೆಸರು | : | ಅಂಬರೀಷ್ |
| ತಂದೆಯ ಹೆಸರು | : | ಭೀಮರಾಯ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಪಿ. ಐ |
| ಸ್ಥಳ | : | ಸಂಚಾರಿ ಠಾಣೆ-2, ಕಲಬುರಗಿ |

**(ದಿನಾಂಕ: 18-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**
**<u>ಮುಖ್ಯ ವಿಚಾರಣೆ: ಸ.ಸ.ಅ ವಕೀಲರಿಂದ</u>**

ನಾನು ದಿಃ 21-10-2019 ರಿಂದ ದಿಃ 12-02-2021 ರವರೆಗೆ ಶಹಾಬಾದ ನಗರ ಪೋಲೀಸ್ ಠಾಣೆಯಲ್ಲಿ ಪಿ.ಐ ಎಂದು ಕಾರ್ಯ ನಿರ್ವಹಿಸಿದ್ದೇನೆ. ಈ ಪ್ರಕರಣದಲ್ಲಿ ದಿನಾಂಕ: 06/10/2020 ರಂದು ಮಧ್ಯಾಹ್ನ 04:00 ಗಂಟೆ ಸುಮಾರಿಗೆ ಠಾಣೆಯಲ್ಲಿ ಬೆಂಡಿ ಬಜಾರದಲ್ಲಿ ಇರುವ ಸಾಬೀರ ಯಾದಗಿರಿರವಾಲೆ ಇವರ ಕಿರಾಣಿ ಅಂಗಡಿಯಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ತಯಾರಿಸುವ ನವಸಾಗರ ದ್ರವಣ, ಮತ್ತು ಕೊಳೆತ ಬೆಲ್ಲ ಸಂಗ್ರಹಿಸಿ ಮಾರಾಟ ಮಾಡುತ್ತಿದ್ದಾರೆ ಅಂತಾ ಖಚಿತಿ ಬಾತ್ಮಿ ಬಂದ ಮೇರೆಗೆ ನಾನು ಚಾಸಾ-2 ರಿಂದ 7 ರವರನ್ನು ಬರಮಾಡಿಕೊಂಡು ಅವರಿಗೆ ಬಾತ್ಮಿ ವಿಷಯ ತಿಳಿಸಿ ದಾಳಿ ಮಾಡೋಣ ಅಂತಾ ಹೇಳಿ, ನಾವೆಲ್ಲರೂ ಕೂಡಿ ಠಾಣೆಯ ಜೀಪ್ ನಂ. ಕೆ.ಎ-32, ಜಿ-1027 ನೇದ್ದರಲ್ಲಿ ಚಾಲಕ ಎಚ್ ಸಿ-69 ರವರೊಂದಿಗೆ ಠಾಣೆಯಿಂದ 04:30 ಗಂಟೆಗೆ ಹೊರಟು ಬೆಂಡಿ ಬಜಾರ ತರಕಾರಿ ಮಾರ್ಕೆಟಗೆ ಹೋಗಿ ಒಂದು ಅಂಗಡಿ ಮರೆಯಲ್ಲಿ ನಿಂತು ನೋಡಲಾಗಿ ಒಂದು ಅಂಗಡಿಯಲ್ಲಿ ಒಬ್ಬ ವ್ಯಕ್ತಿಯು ನವಸಾಗರ ದ್ರವಣವನ್ನು ಮಾರಾಟ ಮಾಡುವುದನ್ನು ಖಚಿತಪಡಿಸಿಕೊಂಡು 05:00 ಗಂಟೆಗೆ ದಾಳಿ ಮಾಡಿ, ಸದರಿ ವ್ಯಕ್ತಿಯನ್ನು ಹಿಡಿದು ವಿಚಾರಿಸಲಾಗಿ ಆತನು ತನ್ನ ಹೆಸರು ಮಹಮದ್ ಸಾಬೀರ ತಂದೆ ಮಹಮದ್ ನಸೀರುದ್ದೀನಸಾಬ ಯಾದಗಿರಿವಾಲೆ, ಸಾಃ ಬೆಂಡಿ ಬಜಾರ ಶಹಾಬಾದ ಅತರಾ ಹೇಳಿರೂ್ತನೆ. ಆತನ ಕಿರಾಣಿ ಅಂಗಡಿಯನ್ನು ಪರಿಶೀಲಿಸಲಾಗಿ 8 ರಟ್ಟಿನ ಬಾಕ್ಸಗಳಲ್ಲಿ 200 ಗ್ರಾಂ ನ ನವಸಾಗರ ಉಂಡಿಗಳು ಹಾಗೂ ಒಂದು ಪ್ಲಾಸ್ಟಿಕ ಚೀಲದಲ್ಲಿ 20 ಕೆ. ಜಿ ಕೊಳೆತ ಬೆಲ್ಲ ಇದ್ದು, ಸದರಿ 8 ಬಾಕ್ಸಗಳಲ್ಲಿ 100 ಉಂಡಿಗಳಂತೆ 800 ನವಸಾಗರ ಉಂಡಿಗಳು ಕಂಡುಬಂದಿರುತ್ತವೆ. ಅವುಗಳ ಬಗ್ಗೆ ವಿಚಾರಿಸಲಾಗಿ ಯಾವುದೇ ಪರವಾಣಿಗೆ ಇಲ್ಲ ಎಂದು ಹೇಳುತ್ತಾನೆ. ನಂತರ ನಾನು ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ 2 ನವಸಾಗರ ಉಂಡಿಗಳು ಹಾಗೂ 500 ಗ್ರಾಂ ಕೊಳೆತ ಬೆಲ್ಲವನ್ನು FSL ಪರೀಕ್ಷೆ ಕುರಿತು ಸ್ಯಾಂಪಲಗಾಗಿ ತೆಗೆದುಕೊಂಡಿರುತ್ತೇನೆ. ಪಂಚನಾಮೆಯನ್ನು 05-15 ರಿಂದ 06-15 ರವರೆಗೆ ಜರುಗಿಸಿ, ನಾವೆಲ್ಲರೂ ಪಂಚನಾಮೆ, ಆರೋಪಿ ಹಾಗೂ ಮುದ್ದೆ ಮಾಲಿನೊಂದಿಗೆ ಠಾಣೆಗೆ

ಹಾಜರಾಗಿ ನಾನು ಸರ್ಕಾರದ ತರಫಿ ಫಿರ್ಯಾದಿ ಸಲ್ಲಿಸಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಆರೋಪಿಯು ನ್ಯಾಯಾಲಯದಲ್ಲಿ ಹಾಜರು ಇರುತ್ತಾರೆ. ಸಾಕ್ಷಿಯು ಮುದ್ದೆ ಮಾಲುಗಳನ್ನು ನೋಡುತ್ತಿದ್ದು, ಅವುಗಳನ್ನು ಒಟ್ಟಾರೆಯಾಗಿ ಮು.ಮಾ.1 ಎಂದು ಗುರುತಿಸಲಾಯಿತು. ಸಾಕ್ಷಿಯು ಪಿರ್ಯಾದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು, ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಸಿ. ಎಸ್. ಪಿ ವಕೀಲರಿಂದ</u>**

ಗುನ್ನಾ ಸ್ಥಳವು ಠಾಣೆಯಿಂದ 500 ಮೀಟರ್ ಅಂತರದಲ್ಲಿ ಇರುತ್ತದೆ. ಪಂಚರನ್ನು ನಮ್ಮ ಸಿಬ್ಬಂದಿ ಬರಮಾಡಿಕೊಂಡಿರುತ್ತಾರೆ. ಗುನ್ನಾ ಸ್ಥಳದ ಅಕ್ಕ ಪಕ್ಕ ಸಾಕಷ್ಟು ಅಂಗಡಿಗಳು ಇವೆ ಅಂದರೆ ಸರಿ. ಆರೋಪಿತನ ಅಂಗಡಿಯನ್ನು ಅಂದಾಜು 20 ಅಡಿ ಅಂತರದಿಂದ ನೋಡಿರುತ್ತೇನೆ. ಆರೋಪಿತನಿಗೆ ಸದರಿ ಅಂಗಡಿ ಸೇರಿರುತ್ತದೆ ಅಂತಾ ನಾನು ದಾಖಲೆಯನ್ನು ಪಡೆದುಕೊಂಡಿರುವುದಿಲ್ಲ. ನಾನು ಹಾಗೂ ನಮ್ಮ ಸಿಬ್ಬಂದಿಯೊಂದಿಗೆ ಆರೋಪಿತನ ವಿರುದ್ಧ ರೇಡ ಪಂಚನಾಮೆ ಜರುಗಿಸಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾವು ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆ ಜರುಗಿಸಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೂ, ಮುದ್ದೆಮಾಲಿಗೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ನಮ್ಮ ಕಛೇರಿ ಅಂಕಿ ಸಂಖ್ಯೆ ತೋರಿಸಲು ಆರೋಪಿತನ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ಧೇನೆ ಎಂದರೆ ಸರಿಯಲ್ಲ. ಮು.ಮಾ-1 ಖೊಟ್ಟಿಯಾಗಿ ತೋರಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿತನನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಅಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ಎಷ್ಟು ಜನರು ಇದ್ದರು ಎಂದು ಹೇಳಲು ಬರುವುದಿಲ್ಲ ಕಾರಣ ಅದು ಬಜಾರ ಇರುತ್ತದೆ.

**ಮರುವಿಚಾರಣೆ: ಇರುವುದಿಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೆ. ಸರಿ ಇದೆ.**

**-Sd-**

**ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ.**

**ನ್ಯಾಯಾಧೀಶರು, ಶಹಬಾದ.**